# ಅಪರ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯ, ಗದಗ

## ಸ್ಪೇಷಲ್ ಕೇಸ್ ನಂಬರ 58/2025

**ಸಿಡಬ್ಲ್ಯೂಃ 1/ಪಿಡಬ್ಲ್ಯೂಃ1**

**ದಿನಾಂಕಃ** 29.04.2026

| | |
|---|---|
| ಸಾಕ್ಷಿದಾರನ/ಳ ಹೆಸರು | – ಶ್ರೀ ಶಂಭುಲಿಂಗ ಬಿಚ್ಚಾಲಿ |
| ತಂದೆಯ ಹೆಸರು | – ಶ್ರೀ ಶಿವಪ್ಪ |
| ವಯಸ್ಸು | – 47 ವರ್ಷ |
| ಉದ್ಯೋಗ | – ಉಪತಹಶೀಲ್ದಾರ, ಡಂಬಳ |
| ವಾಸಸ್ಥಳ | – ಮುಂಡರಗಿ |

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

1. ನಾನು 2018 ರ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಪ್ರಭಾರ ಕಂದಾಯ ನಿರೀಕ್ಷಕನಾಗಿ ಮುಂಡರಗಿಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿಃ14.05.2018 ನಾನು ಮುಂಡರಗಿ ತಹಶೀಲ್ದಾರ ಕಾರ್ಯಾಲಯದಲ್ಲಿ ಬೆಳಗ್ಗೆ ಇದ್ದಾಗ, ಕೊರ್ಲಹಳ್ಳಿ ಗ್ರಾಮದಲ್ಲಿ ತುಂಗಭದ್ರಾ ನದಿಯಲ್ಲಿ ಅಕ್ರಮ ಮರಳು ತುಂಬುತ್ತಿದ್ದಾರೆ ಎಂದು ಮಾಹಿತಿ ಬಂತು. ತಹಶೀಲ್ದಾರ ಇವರಿಗೆ ಬಂದಿರುವ ಮಾಹಿತಿಯನ್ನು ಹೇಳಿ ಅಲ್ಲಿನ ಗ್ರಾಮ ಲೆಕ್ಕಾಧಿಕಾರಿ ಮುಂಡರಗಿ ಮತ್ತು ಗ್ರಾಮ ಲೆಕ್ಕಾಧಿಕಾರಿ ಕೊರ್ಲಹಳ್ಳಿ, ಮತ್ತು ಗ್ರಾಮ ಲೆಕ್ಕಾಧಿಕಾರಿ ಹಾರೋಗೇರಿ ಇವರನ್ನು ಕರೆದುಕೊಂಡು ಕೊರ್ಲಹಳ್ಳಿಗೆ ಹೋದೆನು. ಹೋಗುವ ಪೂರ್ವದಲ್ಲಿ ತಹಶೀಲ್ದಾರ ರವರು ನನಗೆ ಪಂಚರನ್ನು ಕರೆಯಲು ಹೇಳಿದರು. ಮುಂಡರಗಿಯಿಂದ ಹೆಚ್ ಎನ್ ಸುಣಗಾರ ಮತ್ತು ವೆಂಕಟೇಶ ತಳವಾರ ಇವರಿಗೆ ಪಂಚರಾಗಿ ತಹಶೀಲ್ದಾರ ಇವರೊಂದಿಗೆ ಕರೆದುಕೊಂಡು ಕೊರ್ಲಹಳ್ಳಿ ತುಂಗಭದ್ರಾ ನದಿ ಹತ್ತಿರ ಹೋದೆವು. ಅಲ್ಲಿ ಎರಡು ಟ್ರಾಕ್ಟರ ಮರಳು ತುಂಬುತ್ತಿದ್ದರು. ನಾವು ಹೋಗುವುದನ್ನು ನೋಡಿ ಸ್ವರಾಜ ಕಂಪನಿಯ ಟ್ರಾಕ್ಟರ ಮರಳನ್ನು ಅನಲೋಡ್ ಮಾಡಿ ಓಡಿ ಹೋದರು. ಇನ್ನೊಂದು ಅರ್ಧ ಮರಳು ತುಂಬಿದ ಮಹಿಂದ್ರಾ ಕಂಪನಿಯ ಟ್ರಾಕ್ಟರನ್ನು ಹಾಗೆ ಬಿಟ್ಟು ಓಡಿ ಹೋದರು.

3. ಪಂಚನಾಮೆಯನ್ನು ಜರುಗಿಸಲು ಪಂಚರಿಗೆ ವಿಷಯವನ್ನು ತಿಳಿಸಿ ಅವರ ಮುಂದೆ ಪಂಚನಾಮೆಯನ್ನು ಮಾಡಿದೆವು. ಸಾಕ್ಷಿಗೆ ಪಂಚನಾಮೆ ದಾಖಲೆಯನ್ನು ತೋರಿಸಿದಾಗ ಸಾಕ್ಷಿ ಅದನ್ನು ಗುರುತಿಸುತ್ತಾರೆ. ಸದರಿ ದಾಖಲೆಯನ್ನು ನಿಪಿಃ1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿಃ1(ಎ) ಎಂದು ಗುರುತಿಸಲಾಯಿತು. ನಿಪಿಃ1 ಪಂಚನಾಮೆಗೆ

ಪಂಚರು ಸಹಿ ಮಾಡಿದ್ದಾರೆ.

4. ಪಂಚನಾಮೆ ಕಾಲಕ್ಕೆ ಎರಡು ಟ್ರಾಕ್ಟರಗಳನ್ನು ಜಪ್ತಿ ಪಡಿಸಿಕೊಂಡೆವು. ಸಾಕ್ಷಿಗೆ ನಾಲ್ಕು ಪೋಟೊಗಳನ್ನು ತೋರಿಸಿದಾಗ ಸಾಕ್ಷಿ ನಾಲ್ಕು ಪೊಟೊಗಳನ್ನು ಅಲ್ಲಿ ಜಪ್ತಿಪಡಿಸಿದ ಟ್ರಾಕ್ಟರಗಳ ಪೋಟೊಗಳು ಎಂದು ಗುರುತಿಸುತ್ತಾರೆ. ನಾಲ್ಕು ಪೋಟೊಗಳನ್ನು ನಿಪಿ:**2** ರಿಂದ **5** ಎಂದು ಗುರುತಿಸಲಾಯಿತು.

5. ನಮ್ಮ ಜೊತೆ ಬಂದ ಗ್ರಾಮ ಲೆಕ್ಕಾಧಿಕಾರಿಗಳು ಸಾರ್ವಜನಿಕ ಸಹಾಯ ಪಡೆದು ಟ್ರಾಕ್ಟರನ್ನು ಮುಂಡರಗಿಗೆ ತರುವ ಹೊತ್ತಿನಲ್ಲಿ ಟ್ರಾಕ್ಟರನ ಮಾಲೀಕರು, ನಮಗೆ ತಡೆದು ನಮ್ಮ ಜೊತೆ ವಾದ ವಿವಾದ ಮಾಡಿದರು. ಅವರು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿದರು. ಟ್ರಾಕ್ಟರನ್ನು ಮುಂಡರಗಿ ಪೊಲೀಸ ಠಾಣೆಗೆ ತೆಗೆದುಕೊಂಡು ಬಂದೆವು. ಸಾಕ್ಷಿಗೆ ಫಿರ್ಯಾದಿಯನ್ನು ತೋರಿಸಿದಾಗ ಸಾಕ್ಷಿ ಫಿರ್ಯಾದಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ಫಿರ್ಯಾದಿಯನ್ನು ನಿಪಿ: **6** ಎಂದು ಸಾಕ್ಷಿಯ ಸಹಿಯನ್ನು ನಿಪಿ: **6(ಎ)** ಎಂದು ಗುರುತಿಸಲಾಯಿತು.

6. ನ್ಯಾಯಾಲಯದ ಮುಂದೆ ಹಾಜರಿದ್ದ 5ನೇ ಆರೋಪಿ ಆ ಸಮಯದಲ್ಲಿ ಅಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯದ ಮುಂದಿರುವ 7 ಹಾಗೂ 8 ನೇ ಆರೋಪಿತರನ್ನು ಸಾಕ್ಷಿ ಗುರುತಿಸಿದ್ದಾರೆ. 1, 3, 4, 6 ಆರೋಪಿತರು ಗೈರು ಹಾಜರಿದ್ದು, ಆರೋಪಿತರ ಪರ ವಕೀಲರು ಆರೋಪಿತರ ಗೈರು ಹಾಜರಾತಿಗೆ ವಿನಾಯಿತಿ ಕೋರಿ ಅರ್ಜಿ ಸಲ್ಲಿಸಿ ಅದರಲ್ಲಿ ಗುರುತನ್ನು ವಿರೋಧಿಸುವುದಿಲ್ಲ ಎಂದು ಬರೆದುಕೊಟ್ಟಿದ್ದಾರೆ.

7. ಪೊಲೀಸರಿಗೆ ನನ್ನ ಹೇಳಿಕೆಯನ್ನು ಕೊಟ್ಟಿದ್ದೇನೆ.

**ಪಾಟೀ ಸವಾಲು 1,3 ರಿಂದ 7 ಆರೋಪಿತರ ಪರ ವಕೀಲರಾದ ಶ್ರೀ ಸಿ ಆರ್ ವಿ ರವರಿಂದ:**

ಕಾಲಾವಕಾಶ ಕೋರಿದ್ದು, ಪಾಟೀ ಸವಾಲು ಮುಂದೂಡಲಾಯಿತು.

**ಪಾಟೀ ಸವಾಲು 8 ಮತ್ತು 10 ನೇ ಆರೋಪಿತರ ಪರ ವಕೀಲರಾದ ಶ್ರೀ ಎಂ ಕೆ ಸಿ ರವರಿಂದ:**

ಕಾಲಾವಕಾಶ ಕೋರಿದ್ದು, ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೆ ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಗದಗ.